(2) ಇದು ಪರಿಶೀಲನೆಯಲ್ಲಿದೆ

ಈ) ಸ್ವಂತ ಕಟ್ಟಡ: 6
ಬಾಡಿಗೆ ರಹಿತ ಕಟ್ಟಡ 1/7

ಚಿಕ್ಕಮಗಳೂರು ಜಿಲ್ಲೆ ಅಮೃತ್ ಮಹಲ್ ಕಾವಲ್ ಮಂಜೂರಾತಿ.

1721. (2139) ಶ್ರೀ ನೀಲಕಂಠಪ್ಪ.ಬಿ.ಆರ್. (ತರೀಕೆರೆ): ಮಾನ್ಯ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಮೃತ್ ಮಹಲ್ ಕಾವಲ್ ವ್ಯಾಪ್ತಿಯಲ್ಲಿ ಬರುವ ಬೀರೂರು ವ್ಯಾಪ್ತಿಯಲ್ಲಿ ಬರುವ ಜಮೀನಿನಲ್ಲಿ ಖಾಸಗೀ ಪಂಡಿತ್ ಜವಾಹರಲಾಲ್ ನೆಹರು ಕಾಲೇಜಿಗೆ ಎಷ್ಟು ಜಮೀನನ್ನು ಮಂಜೂರು ಮಾಡಲು ಅನುಮತಿ ನೀಡಲಾಗಿದೆ;

ಆ) ಇದೇ ರೀತಿ ಕರ್ನಾಟಕ ವಿದ್ಯುತ್ ಮಂಡಳಿಯಿಂದ ಎಂ.ಎಸ್.ಎನ್.ಅಥವಾ ಇತರೆ ವಿದ್ಯುತ್ ಮಂಡಳಿಗೆ ಕಾವಲು ಜಮೀನನ್ನು ಬಿಡುಗಡೆ ಮಾಡಲಾಗಿದೆಯೇ;

ಇ) ತರೀಕೆರೆ ತಾಲ್ಲೂಕು ಅಜ್ಜಂಪುರ ಅಮೃತ್ ಮಹಲ್ ಕಾವಲ್ ವ್ಯಾಪ್ತಿಯಲ್ಲಿರುವ ಅಜ್ಜಂಪುರ ಗ್ರಾಮದ ವ್ಯಾಪ್ತಿಯ ಹತ್ತಿರದಲ್ಲಿರುವ ಕಾವಲನ್ನು ಸರ್ಕಾರಿ ಆಸ್ಪತ್ರೆ ಮತ್ತು ದನಗಳ ಜಾತ್ರೆಯ ಉಪಯೋಗಕ್ಕಾಗಿ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆಯೇ?

ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು)

ಅ) 50 ಎಕರೆ.

ಆ) ಇಲ್ಲ

ಇ) ಇಲ್ಲ

ತುಮಕೂರು-ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಪ್ರಗತಿ ಬಗ್ಗೆ

1722 (2140) ಶ್ರೀ ನೀಲಕಂಠಪ್ಪ ಬಿ.ಆರ್. (ತರಿಕೇರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು - ಹೊನ್ನಾವರ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಆಗಿ ಪರಿವರ್ತನೆ ಆಗಿದೆಯೇ;

ಆ) ಹಾಗಿದ್ದಲ್ಲಿ ತರೀಕೆರೆ ಶಿವಮೊಗ್ಗದವರೆಗೆ 1999-2000 ಈವರೆವಿಗೂ ತಾತ್ಕಾಲಿಕ ರಸ್ತೆ ದುರಸ್ತಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ;

ಇ) ಈ ರಸ್ತೆಯ ಬಗ್ಗೆ ಪೂರ್ಣ ವಿವರಗಳನ್ನು ಒದಗಿಸುವುದು;

ಈ) ರಾಷ್ಟ್ರೀಯ ಹೆದ್ದಾರಿ ಕಾರ್ಯಕ್ರಮದಲ್ಲಿ ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶದಲ್ಲಿ ರಸ್ತೆ ಅಗಲದ ಬಗ್ಗೆ ಪೂರ್ಣ ಮಾಹಿತಿ ಒದಗಿಸುವುದು;

ಉ) ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ ಕಡೂರು, ತರೀಕೆರೆ, ಶಿವಮೊಗ್ಗದವರೆಗೆ ಡಾಂಬರೀಕರಣಕ್ಕೆ ಎಷ್ಟು ಹಣ ಖರ್ಚು ಮಾಡಲಾಗಿದೆ, ವಿವರ ಒದಗಿಸುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು).

ಅ) ಆಗಿದೆ

ಆ) ತರೀಕೆರೆ-ಶಿವಮೊಗ್ಗದವರೆಗೆ 1999-2000ನೇ ಇಸವಿಯಲ್ಲಿ ತಾತ್ಕಾಲಿಕ ದುರಸ್ತಿಗೆ 20 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ.

ಇ) ತುಮಕೂರು-ಹೊನ್ನಾವರ ರಸ್ತೆಯನ್ನು ಜನವರಿ 1999ರಲ್ಲಿ ರಾಷ್ಟ್ರೀಯ ಹೆದ್ದಾರಿ 206 ಎಂದು ಘೋಷಿಸಲಾಗಿದೆ. ಈ ಹೆದ್ದಾರಿಯು ಪ್ರಮುಖ ಪಟ್ಟಣಗಳಾದ ತುಮಕೂರು-ತಿಪಟೂರು-ಅರಸೀಕೆರೆ-ತರೀಕೆರೆ-ಭದ್ರಾವತಿ-ಶಿವಮೊಗ್ಗ-ಸಾಗರ ಮೂಲಕ ಹಾಯ್ದು ರಾಷ್ಟ್ರೀಯ ಹೆದ್ದಾರಿ 17ನ್ನು ಹೊನ್ನಾವರದಲ್ಲಿ ಸಂಧಿಸುತ್ತದೆ. ಈ ಹೆದ್ದಾರಿಯ ಅಗಲವು ಕನಿಷ್ಠ 3.75 ರಿಂದ ಗರಿಷ್ಠ 7.00 ಮೀಟರ್ ಇರುತ್ತದೆ ಹಾಗೂ 363 ಕಿ.ಮೀ.ಉದ್ದ ಇರುತ್ತದೆ.

ಈ) ಇಂಡಿಯನ್ ರೋಡ್ ಕಾಂಗ್ರೆಸ್ ನಿಗದಿಪಡಿಸಿದ ಗುಣಮಟ್ಟದ (norms) ಪ್ರಕಾರ ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಹದ್ದುಬಸ್ತಿನ ಒಟ್ಟಾರೆ ಅಗಲ (land width) ಕನಿಷ್ಠ 45 ಮೀಟರ್ ಹಾಗೂ ನಗರ:ಪಟ್ಟಣ ಪ್ರದೇಶಗಳಲ್ಲಿ ಕನಿಷ್ಠ 30 ಮೀಟರ್ ಇರಬೇಕು.

ಉ) ರಾಷ್ಟ್ರೀಯ ಹೆದ್ದಾರಿ ನಿರ್ಮಾಣದಲ್ಲಿ ಕಡೂರಿನಿಂದ ತರೀಕೆರೆ, ಶಿವಮೊಗ್ಗದವರೆಗೆ ಆಯ್ದ ಭಾಗಗಳನ್ನು ಅಭಿವೃದ್ಧಿಗೊಳಿಸಲು ಡಾಂಬರೀಕರಣಕ್ಕೆ 391.36 ಲಕ್ಷ ರೂ.ಗಳು ವೆಚ್ಚವಾಗಿದೆ. ಕಿ.ಮೀ.178 ರಿಂದ 206 ರವರೆಗೆ ದುರಸ್ತಿಗೆ 327.08 ಲಕ್ಷ ರೂ.ವೆಚ್ಚವಾಗಿದೆ. ಕಿ.ಮೀ.140ರಿಂದ 148 ರಲ್ಲಿ 38.78 ಲಕ್ಷ ರೂ. ಕಿಮೀ.176, 177 ಮತ್ತು 178 ರಲ್ಲಿ ನಿಯತಕಾಲಿಕ ನವೀಕರಣಕ್ಕೆ 25.50 ಲಕ್ಷ ರೂ.ವೆಚ್ಚವಾಗಿದೆ.

ತರೀಕೆರೆ ತಾಲ್ಲೂಕಿಗೆ ನಬಾರ್ಡ್ ರಸ್ತೆಗಳಿಗೆ ಬಿಡುಗಡೆ ಮಾಡಿರುವ ಹಣದ ಬದ್ದೆ

1724 (2142) ಶ್ರೀ ನೀಲಕಂಠಪ್ಪ ಬಿ.ಆರ್.(ತರೀಕೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ರಸ್ತೆ ನಿರ್ಮಾಣಕ್ಕಾಗಿ 1998-99ನೇ ಸಾಲಿಗಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ಹಾಗೂ ಈಗ ಯಾವ ಕಾಮಗಾರಿಗಳನ್ನು ಕೈಗತ್ತಿಕೊಳ್ಳಲಾಗಿದೆ;

ಆ) ತೆಗೆದುಕೊಂಡಿರುವ ಕಾಮಗಾರಿಗಳು ಪೂರ್ಣಗೊಂಡಿದೆಯೇ;